ಕ.ರಾ.ಪೊ.ಗೃ.ನಿ.ನಿ.ನಿ.
ಸುದ್ದಿಪತ್ರ

November 2011 to Jan 2012
Vol. 02 No. 1 2012

KSPHCL
NEWSLETTER



ಶ್ರೀ ಎಂ.ಎನ್. ರೆಡ್ಡಿ
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು
ಹಾಗೂ ವ್ಯವಸ್ಥಾಪಕ ನಿರ್ದೇಶಕರು
ಕರಾಪೊಗೃನಿನಿನಿ

**Shri M.N. Reddi, IPS**
Addl DGP & MD, KSPHC

## ವ್ಯವಸ್ಥಾಪಕ ನಿರ್ದೇಶಕರ ಸಂದೇಶ

**ನಮ್ಮಿಂದ ಮತ್ತೊಂದು ಸಾಧನೆ!!!**

ಆಡುಗೋಡಿಯಲ್ಲಿ ಪರಿಸರ ಸ್ನೇಹಿ ಪೊಲೀಸ್ ಕಾನ್ಸ್ಟೇಬಲ್ ಫ್ಲ್ಯಾಟ್‌ಗಳನ್ನು ನಂಬಲಸಾಧ್ಯ ವೇಗ ಹಾಗೂ ಶ್ರೇಷ್ಠ ಗುಣಮಟ್ಟದಲ್ಲಿ ನಿರ್ಮಿಸುವ ಮೂಲಕ ನಮ್ಮ ಗುರಿಯನ್ನು ಸಾಧಿಸಿದ್ದೇವೆ. ಕರಾಪೊಗೃನಿನಿನಿವು ಕೇವಲ 15 ದಿನಗಳಲ್ಲಿ ಇಪಿಎಸ್ ಪ್ಯಾನೆಲ್‌ಗಳ ಆಧಾರಿತ ಪ್ರಿ–ಫ್ಯಾಬ್, ಫಾಸ್ಟ್–ಟ್ರ್ಯಾಕ್ ನಿರ್ಮಾಣ ತಂತ್ರಜ್ಞಾನವನ್ನು ಬಳಸಿಕೊಂಡು "ಹಸಿರಿನೆಡೆಗೆ" ಎಂಬ ಪರಿಕಲ್ಪನೆಯಲ್ಲಿ ಈ ಅತ್ಯದ್ಭುತ ಫ್ಲ್ಯಾಟ್‌ಗಳನ್ನು ನಿರ್ಮಿಸುವ ಮೂಲಕ ಕೇವಲ 17 ದಿನಗಳಲ್ಲಿ ಅಗ್ನಿಶಾಮಕ ಅಧಿಕಾರಿಗಳ ಮಾದರಿ ಫ್ಲ್ಯಾಟ್‌ಗಳನ್ನು ನಿರ್ಮಿಸಿ ಸಾಧಿಸಿದ ತನ್ನದೆ ಸಾಧನೆಯನ್ನು ಹಿಂದಿಕ್ಕಿದೆ.

ಆಡುಗೋಡಿಯಲ್ಲಿ ಪೊಲೀಸ್ ಕಾನ್ಸ್ಟೇಬಲ್ ಫ್ಲ್ಯಾಟ್‌ಗಳನ್ನು ದಿನಾಂಕ 29.11.2011ರಂದು ಪ್ರಾರಂಭಿಸಿ ವಿದ್ಯುತ್ ಹಾಗೂ ನೀರಿನ ಸಂಪರ್ಕಗಳನ್ನು ಒಳಗೊಂಡಂತೆ ಎಲ್ಲ ರೀತಿಯಿಂದಲೂ ಕೇವಲ 15 ಕೆಲಸದ ದಿನಗಳಲ್ಲಿ ಪೂರ್ಣಗೊಳಿಸಿ ದಿನಾಂಕ 14.12.2011ರಂದು ವಾಸಕ್ಕೆ ಸಜ್ಜುಗೊಳಿಸಲಾಯಿತು.

ಈ ವಿಶ್ವ ದರ್ಜೆಯ ಮಾದರಿ ಫ್ಲ್ಯಾಟ್‌ಗಳನ್ನು ಸನ್ಮಾನ್ಯ ಗೃಹ ಮತ್ತು ಸಾರಿಗೆ ಸಚಿವರಾದ ಶ್ರೀ ಆರ್. ಅಶೋಕ ಹಾಗೂ ಲೋಕಸಭಾ ಸದಸ್ಯರಾದ ಶ್ರೀ ಅನಂತಕುಮಾರ್ ಅವರು ದಿನಾಂಕ 18.12.2011ರಂದು ಉದ್ಘಾಟಿಸಿ, ಮುಖ್ಯ ಪೇದೆ ಶ್ರೀ ಜಿ.ದಾಸಣ್ಣ ಮತ್ತು ಟ್ರಾಫಿಕ್ ಪೊಲೀಸ್ ಕಾನ್ಸ್ಟೇಬಲ್ ಶ್ರೀ ಬಸವರಾಜ್.ವಿ.ಹಳ್ಳಿ ಇವರಿಗೆ ಶ್ರೀ ಮಾರ್ಕ್ ವಿನ್‌ಫೀಲ್ಡ್, ಸಿಇಒ, ಪರ್ಲ್ಸ್ ಮೈಹೋಮ್, ಆಸ್ಟ್ರೇಲಿಯಾ, ಇವರ ಉಪಸ್ಥಿತಿಯಲ್ಲಿ ಹಸ್ತಾಂತರಿಸಿದರು.

ರಾಜಾಜಿನಗರದಲ್ಲಿನ ಅಗ್ನಿಶಾಮಕ ಅಧಿಕಾರಿಗಳ ಮಾದರಿ ಫ್ಲ್ಯಾಟ್‌ಗಳು ಹಾಗೂ ಆಡುಗೋಡಿ ಪೊಲೀಸ್ ಕಾನ್ಸ್ಟೇಬಲ್‌ಗಳ ಮಾದರಿ ಫ್ಲ್ಯಾಟ್‌ಗಳ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರ, ಬಳಕೆದಾರ ಇಲಾಖೆಗಳು ಹಾಗೂ ಸಾರ್ವಜನಿಕರಿಂದ ಪಡೆದ ಅಭೂತಪೂರ್ವ ಪ್ರತಿಕ್ರಿಯೆಯು ಪೊಲೀಸ್ ಮತ್ತು ಸಂಬಂಧಿತ ಇಲಾಖೆಗಳಿಗೆ ಕಡಿಮೆ ದರದಲ್ಲಿ, ಶ್ರೇಷ್ಠ ಗುಣಮಟ್ಟದ ಮನೆಗಳನ್ನು ಒದಗಿಸುವ ನಮ್ಮ ಬದ್ಧತೆಯನ್ನು ಮತ್ತಷ್ಟು ದೃಢಗೊಳಿಸಿದೆ.

ಬಳಕೆದಾರರಿಗೆ ಅತ್ಯಧಿಕ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಈ ಕಟ್ಟಡದ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ಕರಾಪೊಗೃನಿನಿನಿವು ಅಸಂಖ್ಯಾತ ಆಯ್ಕೆಗಳನ್ನು ಅನ್ವೇಷಿಸುತ್ತಿದೆ.

ಕರಾಪೊಗೃನಿನಿನಿವು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಆವಿಷ್ಕಾರಕ ಉತ್ಪನ್ನಗಳನ್ನು ಬಳಸಲು ಕಟಿಬದ್ಧವಾಗಿದೆ. ನಾವು ಬಳಸುವ ಫಾಸ್ಟ್ ಟ್ರ್ಯಾಕ್ ನಿರ್ಮಾಣ ತಂತ್ರಜ್ಞಾನವು ಭೂಮಿಯನ್ನು ರಕ್ಷಿಸಲು ನಮಗೆ ಸಹಾಯವಾಗುತ್ತದೆ. ಇಪಿಎಸ್ ಪ್ಯಾನೆಲ್ ತಂತ್ರಜ್ಞಾನದಿಂದ ನಿರ್ಮಿಸಿದ ಮನೆಗಳು ಅಧಿಕ ಶಕ್ತಿ ಸಾಮರ್ಥ್ಯವನ್ನು ಹೊಂದಿವೆ. ಈ ಫ್ಲ್ಯಾಟ್‌ಗಳನ್ನು ನಿರ್ಮಿಸುವಾಗ ಅಲ್ಪ ಪ್ರಮಾಣದಲ್ಲಿ ನೀರಿನ ಬಳಕೆಯಾಗಿರುವುದು ಇದರ ಒಂದು ಪ್ರಮುಖ ಉದ್ದೇಶ. ಹೀಗಾಗಿ ಈ ಫ್ಲ್ಯಾಟ್‌ಗಳನ್ನು ನಿರ್ಮಿಸುವಾಗ ಬಳಸಿದ ನೀರು ತೀರಾ ನಗಣ್ಯ.

ಕರಾಪೊಗೃನಿನಿನಿವು ಈ ಮಾದರಿ ಫ್ಲ್ಯಾಟ್‌ಗಳಲ್ಲಿ ವಾಸಿಸುವವರಿಗೆ ನೆಮ್ಮದಿಯನ್ನು ಸೃಷ್ಟಿಸುವ ವಾತಾವರಣ ಮತ್ತು ಉತ್ತಮ ಜೀವನ ಶೈಲಿಯನ್ನು ಒದಗಿಸುವ ಉದ್ದೇಶದಿಂದ ಸೋಲಾರ್ ವಾಟರ್ ಹೀಟರ್ಸ್, ಎಲ್‌ಇಡಿ ಲೈಟ್‌ಗಳು, ಕಂಪೋಸೈಟ್ ಬಾಗಿಲುಗಳು, ಆಧುನಿಕ ಅಡುಗೆ ಮನೆ, ಅಲ್ಯೂಮಿನಿಯಂ ಕಿಟಕಿಗಳು ಹಾಗೂ ಮಳೆ ನೀರು ಕೊಯ್ಲುಗೆ ಅವಕಾಶ ಕಲ್ಪಿಸಲಾಗಿದೆ. ಕರಾಪೊಗೃನಿನಿನಿವು, ಕಟ್ಟಡದಲ್ಲಿ ವಾಸಿಸುವವರಿಗೆ ಉತ್ತಮ ಸೌಲಭ್ಯ ಒದಗಿಸುವುದು ಮತ್ತು ಪರಿಸರವನ್ನು ಸಂರಕ್ಷಿಸುವ ಸಲುವಾಗಿ ಇದೇ ರೀತಿಯ ಇನ್ನೂ ಹೆಚ್ಚು ಫಾಸ್ಟ್ ಟ್ರ್ಯಾಕ್ ಕಟ್ಟಡಗಳ ನಿರ್ಮಾಣ ಮುಂದುವರಿಸುವ ಉದ್ದೇಶ ಹೊಂದಿದೆ.

## Managing Director's Message

***We did it again!!!***

The launch of Audugodi Police Constables' Flats is a materialization of our vision to build high quality green homes at incredible speed. KSPHC has built these outstanding flats focusing on the concept of "Going Green" using EPS panels based, pre-fab, fast- track construction technology, in just 15 days after its own construction of Model Fire Officers Flats that were built in just 17 days!

The construction of the Audugodi Police Constables' flats started on 29.11.2011 and the same were completed in all respects, including power and water connections, within 15 working days and were made ready for occupation on 14.12.11.

These world-class Model Flats were inaugurated by Hon'ble Minister for Home and Transport Shri R. Ashoka and Hon'ble Member of Parliament Shri Ananth Kumar on 18.12.2012 and the same were handed over to Head Constable Shri G Dasanna and Traffic Police Constable Shri Basavaraj V Halli in the presence of CEO, Pearls MiiHome, Australia, Mr. Mark Winfield.

The overwhelming response we received from the GOK, the User Depts and the general public for Rajajinagar Fire Officers' Model flats and Audugodi Police Constables' Flats has reinforced our commitment of providing low-cost, sustainable and high quality dwellings for our Police and allied forces.

KSPHC is also exploring myriad of options where this building system can be effectively used so as to maximize the benefits to the end users.

KSPHC is dedicated to use innovative products to protect the environment. The Fast-track construction technology that we use helps us save our earth. Houses built by EPS panel technology provide more energy efficiency. Reducing water consumption was one of the key objectives while building these flats. There was negligible use of water during the construction of these flats.

KSPHC has installed Solar water Heaters, LED lights, Composite doors, Modular kitchens, Aluminium Windows and made provision for RWH in these model flats to benefit the occupants in improving the quality of life by providing environment that is more comfortable, ultimately leading to greater productivity at work. KSPHC aims to continue to construct many such fast track buildings which would provide benefits to the occupants and also protect the environment.

**ನಮ್ಮ ಧ್ಯೇಯವು ಸುಂದರ ಪರಿಸರದ ವಿಶ್ವಕ್ಕಾಗಿ ಪರಿಸರ ಸ್ನೇಹಿ ಮನೆಗಳ ನಿರ್ಮಾಣ!!!**

**Our Goal is to build green homes for a Greener Earth!!!**



ಮಾದರಿ ಪೊಲೀಸ್ ಕಾನ್‌ಸ್ಟೇಬಲ್‌ಗಳ ಫ್ಲ್ಯಾಟ್‌ಗಳನ್ನು ಸನ್ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರಾದ ಶ್ರೀ ಆರ್. ಅಶೋಕರವರು, ಶ್ರೀ ಮಾರ್ಕ್ ವಿನ್‌ಫಿಲ್ಡ್, ಸಿಇಓ, ಪರ್ಲ್ಸ್ ಮೈಹೋಮ್ ಪ್ರೈ ಲಿ. ಹಾಗೂ ಕರಾಪೊಗೃನಿನಿನಿದ ಅಂದಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಆರ್.ಕೆ. ದತ್ತಾರವರ ಉಪಸ್ಥಿತಿಯಲ್ಲಿ ದಿನಾಂಕ 18.12.2011ರಂದು ಉದ್ಘಾಟಿಸಿದರು.

Inauguration of Model Police Constables' Flats by Hon'ble Minister for Home and Transport, Shri R. Ashoka in the presence of Shri Mark Winfield, CEO, Pearls MiiHome Pty Ltd and Shri R. K. Dutta, the then C& MD, KSPHC Ltd on 18.12.2011.



ಸನ್ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರಾದ ಶ್ರೀ ಆರ್. ಅಶೋಕ, ಲೋಕಸಭಾ ಸದಸ್ಯರಾದ ಶ್ರೀ ಅನಂತ ಕುಮಾರ್ ಮತ್ತು ಶ್ರೀ ಮಾರ್ಕ್ ವಿನ್‌ಫಿಲ್ಡ್, ಸಿಇಓ, ಪರ್ಲ್ಸ್ ಮೈಹೋಮ್ ಪ್ರೈ ಲಿ. ಇವರುಗಳು ಮಾದರಿ ಫ್ಲ್ಯಾಟ್‌ಗಳ ಕೀಗಳನ್ನು ಹೆಡ್ ಕಾನ್‌ಸ್ಟೇಬಲ್‌ರಾದ ಶ್ರೀ ಜಿ. ದಾಸಣ್ಣರವರಿಗೆ ಹಸ್ತಾಂತರಿಸಿದರು.

Handing over the keys of the Model Flats by Hon’ble Minister for Home and Transport Shri R. Ashoka, Hon’ble Member of Parliament Shri Ananth Kumar and Mr. Mark Winfield, CEO, Pearls MiiHome, Australia, to Head Constable Shri G. Dasanna



ಸನ್ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರಾದ ಶ್ರೀ ಆರ್. ಅಶೋಕ ಅವರು ಮಾದರಿ ಫ್ಲ್ಯಾಟ್‌ಗಳ ಕೀಗಳನ್ನು ಸಂಚಾರಿ ಪೊಲೀಸ್ ಕಾನ್‌ಸ್ಟೇಬಲ್‌ರಾದ ಶ್ರೀ ಬಸವರಾಜ ವಿ ಹಳ್ಳಿರವರಿಗೆ ಹಸ್ತಾಂತರಿಸಿದರು.

Handing over the keys of the Model Flats by Hon’ble Minister for Home and Transport Shri R. Ashoka to Traffic Police Constable Shri Basavaraj V Halli

> “If you want a place in the sun,
> you have to expect some blisters”
> \- Unknown

## ದಿನಾಂಕ 23.12.2011ರಂದು ನಡೆದ 137ನೇ ಮಂಡಳಿ ಸಭೆಯ ಪ್ರಮುಖ ನಿರ್ಧಾರಗಳು

### ಆಡಳಿತ ಮಂಡಳಿಯಲ್ಲಿನ ಬದಲಾವಣೆಗಳು

1. ಶ್ರೀ ಕುಚ್ಚಣ್ಣ ಶ್ರೀನಿವಾಸನ್ ಅವರು ನಿವೃತ್ತಿಯಾದ ಕಾರಣ ದಿನಾಂಕ 31.10.2011ರಂದು ಸ್ಥಾನ ತೊರೆಯಬೇಕಾಯಿತು.
2. ಶ್ರೀ ರೂಪಕ್ ಕುಮಾರ ದತ್ತಾ, ಭಾ.ಪೊ.ಸೇ., ಇವರನ್ನು ಡಿಜಿಪಿ ಮತ್ತು ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿ 04ನೇ ನವೆಂಬರ್, 2011ರಂದು ನೇಮಕಗೊಳಿಸಲಾಯಿತು.
3. ಡಾ.ಬಿ.ವಿ. ವೆಂಕಟರಾಮ ರೆಡ್ಡಿ, ಪ್ರಾಧ್ಯಾಪಕರು, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಐಐಎಸ್‌ಸಿ, ಬೆಂಗಳೂರು ರವರನ್ನು 17ನೇ ಅಕ್ಟೋಬರ್, 2011ರಂದು ನಿರ್ದೇಶಕರಾಗಿ ನೇಮಕಗೊಳಿಸಲಾಯಿತು.
4. ಶ್ರೀ ಅಶಿತ್ ಮೋಹನ ಪ್ರಸಾದ್, ಭಾ.ಪೊ.ಸೇ., ಇವರ ಸ್ಥಾನದಲ್ಲಿ ಶ್ರೀ ಹೆಚ್.ಸಿ. ಕಿಶೋರಚಂದ್ರ, ಭಾ.ಪೊ.ಸೇ., ಎಡಿಜಿಪಿ (ಸಿಎಲ್&ಎಂ) ಅವರನ್ನು 17ನೇ ಅಕ್ಟೋಬರ್, 2011ರಂದು ನಿರ್ದೇಶಕರಾಗಿ ನೇಮಕಗೊಳಿಸಲಾಯಿತು.

### ನಿಗಮದ ಹೆಸರಿನಲ್ಲಿ ಬದಲಾವಣೆ

ನಿಗಮದ ಹೆಸರನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ ಎಂಬುದನ್ನು **"ಕರ್ನಾಟಕ ರಾಜ್ಯ ಪೊಲೀಸ್ ಹಾಗೂ ಮೂಲಸೌಕರ್ಯ ನಿಗಮ ನಿಯಮಿತ"** ಎಂದು ಬದಲಿಸಲು ಮಂಡಳಿಯು ಅನುಮತಿ ನೀಡಿದ್ದು, ಸರ್ಕಾರದ ಅನುಮತಿಯನ್ನು ನಿರೀಕ್ಷಿಸಲಾಗುತ್ತಿದೆ.

### ಕರಾಪೊಗೃನಿನಿನಿದ ನೂತನ ಸಿಎಸ್‌ಆರ್ ನೀತಿ

"ನಮ್ಮ ಗ್ರಾಹಕ ವಿಭಾಗವನ್ನು ತೃಪ್ತಿಪಡಿಸಲು, ವಾತಾವರಣ ವೈಪರೀತ್ಯಗಳನ್ನು ತಡೆದುಕೊಳ್ಳಬಲ್ಲ ಉತ್ಪನ್ನಗಳನ್ನು ಹಾಗೂ ಮಿತವ್ಯಯದ ದರದಲ್ಲಿ ಉತ್ಕೃಷ್ಠ ಗುಣಮಟ್ಟದ ಸೇವೆಯನ್ನು ಒದಗಿಸಲು ನಾವು ಕಟಿಬದ್ಧವಾಗಿದ್ದೇವೆ. ಎಲ್ಲಾ ಪಾಲುದಾರರಿಗೆ ಅಧಿಕ ಪ್ರಯೋಜನವಾಗಲು ತಾತ್ವಿಕವಾಗಿ, ಪಾರದರ್ಶಕ ಹಾಗೂ ನಾವಿನ್ಯತೆಯ ವ್ಯವಹಾರದ ಪದ್ಧತಿಯನ್ನು ಅಳವಡಿಸಿಕೊಂಡಿದ್ದೇವೆ. ನಾವು ನಮ್ಮ ಸಮೂಹದ ಸಿಬ್ಬಂದಿಗಳ ಮತ್ತು ಪಾಲುದಾರರ ಕುರಿತು ಅತೀವ ಕಾಳಜಿ ಹೊಂದಿದ್ದು, ಅವರ ಮತ್ತು ಅವರ ಕುಟುಂಬಗಳ ಸುರಕ್ಷತೆಯನ್ನು ಕಾಪಾಡುವ ಮೂಲಕ ಸಮಾಜಕ್ಕೆ ನಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದೇವೆ.

### ದಿನಾಂಕ 20.12.2011ರಂತೆ ಕಾರ್ಯನಿರ್ವಹಣೆಯ ಮುಖ್ಯಾಂಶಗಳು

| | |
|---|---|
| ಕೆಲಸದ ಒಟ್ಟು ವಹಿವಾಟು | : 86.70 ಕೋಟಿ |
| ಗಳಿಸಿದ ಇಟಿಪಿ | : 8.16 ಕೋಟಿ |
| ಮಾರಾಟ (ಇ-ಕಾಮ್) | : 2.25 ಕೋಟಿ |

### ಆಡಳಿತ ಮಂಡಳಿಯಲ್ಲಿನ ಬದಲಾವಣೆಗಳು

ಶ್ರೀ ಆರ್. ಕೆ. ದತ್ತಾ ಅವರು ದಿನಾಂಕ 01.01.2012ರಂದು ಸಿಐಡಿಗೆ ವರ್ಗಾವಣೆಗೊಂಡ ನಿಮಿತ್ತ ಕರಾಪೊಗೃನಿನಿನಿದ ಸಿಎಂಡಿ ಸ್ಥಾನವನ್ನು ತ್ಯಜಿಸಬೇಕಾಯಿತು.

ಶ್ರೀ ಶಂಕರ್ ಎಂ. ಬಿದರಿ, ಭಾಪೊಸೇ, ಡಿಜಿ ಮತ್ತು ಐಜಿಪಿ, ಕರ್ನಾಟಕ ರಾಜ್ಯ, ಅವರನ್ನು ಪದನಿಮಿತ್ತ ಅಧ್ಯಕ್ಷರನ್ನಾಗಿ ದಿನಾಂಕ 01.01.2012ರಂದು ಕರ್ನಾಟಕ ಸರ್ಕಾರವು ನೇಮಿಸಿದೆ.

ಶ್ರೀ ಎಂ.ಎನ್. ರೆಡ್ಡಿ, ಭಾಪೊಸೇ., ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಅವರನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ದಿನಾಂಕ 01.01.2012ರಂದು ನೇಮಿಸಲಾಗಿದೆ.

## Imp decisions of 137th Board Meeting held on 23rd Dec 2011

### Change in Board Composition

1. Retirement of Shri Kuchanna Srinivasan on 31st October, 2011 on attaining superannuation.
2. Appointment of Shri Rupak Kumar Dutta, IPS as DGP & Chairman and Managing Director on 4th Nov 2011.
3. Appointment of Dr. B.V. Venkatarama Reddy, Professor, Department of Civil Engineering, IISc, Bangalore as Director on 17th Oct 2011.
4. Appointment of Shri H.C. Kishorechandra, IPS, ADGP (CL&M) as Director in place of Shri Ashit Mohan Prasad, IPS on 17th Oct 2011.

### Change of Name of the Corporation

The Board has approved the change of name of the corporation from Karnataka State Police Housing Corporation Limited to **"Karnataka State Police Housing and Infrastructure Corporation Limited"**. The approval of Government is awaited.

### KSPHC's New CSR Policy

"We are committed to deliver environmentally sustainable products and services of high quality with cost efficiency and in time, for the benefit of our client departments. We are committed to ethical, transparent and innovative business practices for the benefit of all stakeholders. We are concerned about the immediate community of employees and other stakeholders of our clients and shall strive for their and their families' well being as part of our contribution to the society at large".

### Performance Highlights as on 20.12.2011

| | |
|---|---|
| Total Works Turnover | : 86.70 Cr |
| ETP earned | : 8.16 Cr |
| Sales (e-com) | : 2.25 Cr |

### Changes in Management

Shri R K Dutta ceased to be the CMD of KSPHC due to his transfer to CID on 01.01.2012.

Shri Shankar M Bidari, IPS, DG&IGP, Karnataka State, has been appointed as Ex Officio Chairman of the Corporation on 1.1.2012 by the GoK.

Shri M.N. Reddi, IPS, Addl DGP, has been appointed as the Managing Director of the Corporation on 1.1.2012

"All our dreams can come true - if we have the courage to pursue them."
- Walt Disney

## ಮಾದರಿ ಅಗ್ನಿಶಾಮಕ ಅಧಿಕಾರಿಗಳ ಫ್ಲ್ಯಾಟ್‌ಗಳಿಗೆ ಸ್ವೀಕರಿಸಲಾದ ಪ್ರತಿಕ್ರಿಯೆಗಳು ಮತ್ತು ಸಲಹೆಗಳು

- ಪ್ರಿ–ಫ್ಯಾಬ್ ಸ್ಟ್ರಕ್ಚರ್‌ನ ಅಳವಡಿಕೆಯು ಸದೃಢವಾಗಿದ್ದು, ಆಕರ್ಷಣೀಯವಾಗಿದೆ. ಶೀಘ್ರಗತಿಯಲ್ಲಿ ನಿರ್ಮಿಸಬಹುದಾದ ಈ ವ್ಯವಸ್ಥೆಯು ಮುಖ್ಯವಾಗಿ ವಸತಿಗಳ ಅಗತ್ಯತೆಯಿರುವ ನಮ್ಮಂತಹ ರಾಷ್ಟ್ರಕ್ಕೆ ಬಹುದೊಡ್ಡ ಅನುಕೂಲವಾಗಿದೆ. ಇದೊಂದು ಕರಾಪೊಗೃನಿನಿನಿಯ ಅತ್ಯುತ್ತಮ ಪ್ರಯತ್ನ. **– ಹರಿದಾಸ್. ಯು.**
**ಎಂಡಿ, ಪಾಲಿನೇಟ್ ಫೋಮ್ (ಪ್ರೈ) ಲಿ., ಬೆಂಗಳೂರು.**
- ನಿಜವಾಗಿಯೂ ಇದೊಂದು ಅದ್ಭುತ ಹಾಗೂ ಶ್ರೇಷ್ಠವಾದದ್ದಾಗಿದೆ **– ಅಶೋಕ್, ಇ.ಎಸ್.**
- ತುಂಬಾ ಚೆನ್ನಾಗಿದೆ, ಆಸ್ಟ್ರೇಲಿಯಾದಲ್ಲಿರುವ ಮನೆಗಳಂತೆ ಉತ್ತಮವಾಗಿ ನಿರ್ಮಿಸಲಾಗಿದೆ. **– ಎ. ಸ್ಮಿತ್, ಆಸ್ಟ್ರೇಲಿಯ.**
- ಈ ರೀತಿಯ ಉತ್ತಮ ಪ್ರಯತ್ನ ಕೈಗೊಂಡಿದ್ದಕ್ಕೆ ಧನ್ಯವಾದಗಳು. ಈ ಸೌಲಭ್ಯವನ್ನು ಜನಸಾಮಾನ್ಯರಿಗೂ ತಲುಪಲು ಬೆಂಗಳೂರಿನಲ್ಲಿ ಕಾರ್ಖಾನೆ ಪ್ರಾರಂಭವಾಗುವಂತಾಗಬೇಕು. **– ವಿನಯ್ ಆಗ್ನೇಲ್ಲೋ, ಆರ್ಕಿಟೆಕ್ಟ್**
- ನಂಬಲಸಾಧ್ಯವಾದ ಮತ್ತು ಅತ್ಯುದ್ಭುತ. ಕಡಿಮೆ ವೆಚ್ಚದ ಮನೆಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇದೊಂದು, ಮುಂದಿನ ಆಧುನಿಕ ಪೀಳಿಗೆಗೆ ಆರ್ಥಿಕವಾಗಿ ಮತ್ತು ಸಮಯದ ಉಳಿತಾಯದ ದೃಷ್ಟಿಯಿಂದ ಹೊಸ ಕ್ರಾಂತಿಗೆ ನಾಂದಿಯಾಗಲಿದೆ. **– ವೆಂಕಟಸ್ವಾಮಿ. ಕೆ.**
- ಉತ್ತಮ ಗುಣಮಟ್ಟದ ನಿರ್ಮಾಣ ಮತ್ತು ವಿಶಿಷ್ಟ ರೂಪದ ತಂತ್ರಜ್ಞಾನ ಹಾಗೂ ಉತ್ತಮ ದರ್ಜೆಯ ಸಾಮಗ್ರಿಗಳ ಜೊತೆಗೆ ಸಮಯವೂ ಕೂಡ ಉಳಿತಾಯವಾಗಲಿದೆ. **– ಬಿ. ಮಧುಸೂಧನ್**
- ಈ ಮಾದರಿಯ ಮನೆಗಳನ್ನು ಹಾಲಿಯಿರುವ ಮನೆಗಳಿಗೆ ಅಳವಡಿಸಿಕೊಳ್ಳಲು ಸಾಧ್ಯವೇ? **– ನಾಗರಾಜ್**
- ಭಾರತದ ವಾತಾವರಣಕ್ಕೆ ಇದು ಉತ್ತಮವಾಗಿದ್ದು, ಸಿಮೆಂಟ್ ಮತ್ತು ಮರಳಿನ ಅಗತ್ಯವಿರುವುದಿಲ್ಲ. **– ಆರ್.ಎಸ್. ಮೂರ್ತಿ**

## COMMENTS AND SUGGESTIONS RECEIVED FOR THE MODEL FIRE OFFICERS' FLATS

- The installation of Pre-fab structure is very strong and aesthetically sound. The way in which, the erection can be carried out fast is an added advantage for our country, especially where the housing requirement is a priority. Well done KSPHC **- Mr. Haridas U**
**MD, Polynate Foam(P) Ltd, Bangalore.**
- Amazing and too good to be true!! **– Mr. Ashok .E.S**
- Very nice. Well constructed just like Home in Australia **- Mr. A. Smith, Australia.**
- Congrats on taking on an initiative of such a kind. Please make this available for common man, by starting the factory process in Bangalore. Execellent Finish. Best of Luck. **–Mr. Vinay Agnello, Architect.**
- Unbelievable and Stunning. It brings revolution in the upcoming of modern, economical and time saving housing colonies towards solving the most burning low cost housing problems. **-Mr. Venkataswamy. K**
- Good construction & special type of technology and it also saves time with good quality materials. **- Mr. B. Madhusudan**
- Can we have this kind of house on an existing house? **- Mr. Nagaraj**
- Good for Indian conditions as there is no use of cement and sand. **- Mr. R. S. Murthy**

## ಸಿಓಪಿ ಮಂಗಳೂರಿನ ಉದ್ಘಾಟನೆ

## Inauguration of COP Mangalore



ಮಂಗಳೂರಿನ ಪೊಲೀಸ್ ಆಯುಕ್ತರ ಕಟ್ಟಡವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದ ಗೌಡ ಹಾಗೂ ಸನ್ಮಾನ್ಯ ಗೃಹ ಹಾಗೂ ಸಾರಿಗೆ ಸಚಿವ ಶ್ರೀ ಆರ್. ಅಶೋಕ್ ಅವರು ದಿನಾಂಕ 28.01.2012ರಂದು ಉದ್ಘಾಟಿಸಿದರು.

Inauguration of Commissioner of Police Building, Mangalore by Hon'ble Chief Minister Shri D.V. Sadananda Gowda and Hon'ble Minister for Home and Transport Shri R. Ashoka on 28.1.2012